ರುಚಿಕರವಾದ ಉಪಹಾರ
ಸಿಹಿ – ಖಾರ ತಿಂಡಿಗಳು
ನ್ಯೂ ಕೋರ್ಟ್ ರೆಸ್ಟೋರೆಂಟ್
ಹೊಸ ಬಸ್‌ಸ್ಟ್ಯಾಂಡ್ ಬಳಿ
ಕುಂದಾಪುರ
ಫೋ : 232878

www.kundaprabha.com
e-mail : kundaprabha@gmail.com
A Model Daily Bulletin

# ಕುಂದಪ್ರಭ
ವಾರಪತ್ರಿಕೆ

ಸ್ಥಾಪನೆ : 1948
6 ದಶಕಗಳ ವಿಶ್ವಾಸನೀಯ ಸೇವೆಯಲ್ಲಿ
ಶೇಟ್ ಜ್ಯುವೆಲ್ಲರ್ಸ್
ಶಂಕರ್ ಶೇಟ್ ಬಿಲ್ಡಿಂಗ್
ಮುಖ್ಯರಸ್ತೆ, ಕುಂದಾಪುರ
ಫೋನ್ : 230242

॥ ಸಂಪುಟ : 28 ॥ ಸಂಚಿಕೆ : 14॥ UDP/1263/2018-20 || R.NO.50495/91 ॥ ತಾರೀಕು : 16–05–2018 ॥ ರೂ 5/– ॥ ವಾರ್ಷಿಕ ಚಂದಾ : 300/– ಅಂಚೆಯಲ್ಲಿ : 400/

# ಕರಾವಳಿ ತುಂಬ ಕೇಸರಿ

ಕುಂದಾಪುರ ಬೈಂದೂರು ಕ್ಷೇತ್ರಗಳಲ್ಲಿ ಬೆಳಿಗ್ಗೆಯಿಂದಲೇ ಜನ ಕುತೂಹಲ ಆತಂಕದಿಂದ ಚುನಾವಣಾ ಫಲಿತಾಂಶ ಗಮನಿಸುತ್ತಿದ್ದು ಬಿಜೆಪಿ ಬಹುತೇಕ ಕ್ಷೇತ್ರಗಳಲ್ಲಿ ಮುನ್ನಡೆದ ಸುದ್ಧಿ ತಿಳಿಯುತ್ತಲೇ, ಕಾರ್ಯಕರ್ತರು ಪಟಾಕಿ ಸಿಡಿಸಿ ಬೈಕುಗಳಲ್ಲಿ ಬಾವುಟ ಹಿಡಿದು ಓಡಾಡಲು ಆರಂಭಿಸಿದ್ದರು.

ಹಾಲಾಡಿ ಶ್ರೀನಿವಾಸ ಶೆಟ್ಟಿಯವರು ಭರ್ಜರಿ ಮುನ್ನಡೆ ಆರಂಭದ ಸುತ್ತಿನಿಂದಲೇ ಪಡೆಯುತ್ತಾ ಬಂದಿದ್ದರಿಂದ ಕುಂದಾಪುರದಲ್ಲಿ ಎಷ್ಟು ಲೀಡಲ್ಲಿ ವಿನ್ನಾಗುತ್ತಾರೆ ಎಂಬ ಕುತೂಹಲವಷ್ಟೇ ಉಳಿದಿತ್ತು.

ಅಲ್ಪ ಮುನ್ನಡೆಯಲ್ಲಿದ್ದ ಬಿ.ಎಂ. ಸುಕುಮಾರ್ ಶೆಟ್ಟಿಂಯುವರು ನಂತರ ದಾಪುಗಾಲಲ್ಲಿ ಮುನ್ನಡೆಯುತ್ತಿದ್ದಂತೆ ಅಲ್ಲಿಯೂ ಕೇಸರಿ ಪಡೆಯ ಹರ್ಷೋದ್ಗಾರ ಕೇಳಿ ಬಂತು.

ಕಾರ್ಕಳ, ಕಾಪು, ಕ್ಷೇತ್ರಗಳಲ್ಲಿ ಖಚಿತ ಜಯ ಹಾಗೂ ಉಡುಪಿ ಕ್ಷೇತ್ರದಲ್ಲಿ ನಿಕಟ ಸ್ಪರ್ಧೆ ಕೇಳಿ ಬರುತ್ತಿದ್ದಾಗಲೇ ವಾಟ್ಸ್‌ಅಪ್‌ಗಳಲ್ಲಿ "ಕ್ಲೀನ್‌ಸ್ವೀಪ್" ಎಂಬ ಶಬ್ಧಗಳು ಹರಿದಾಡಿದವು. ಕರ್ನಾಟಕದಲ್ಲಿ ಬಿಜೆಪಿ ಮುನ್ನಡೆಗೆ ಕರಾವಳಿ ಜಿಲ್ಲೆಗಳು ಮಹತ್ವದ ಕೊಡುಗೆ ನೀಡಿವೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಾಂಗ್ರೆಸ್‌ನ ಸಚಿವ ಖಾದರ್ ಮಾತ್ರ ಕ್ಷೇತ್ರ ಉಳಿಸಿಕೊಂಡರೆ ಬಿಜೆಪಿಯ ಹೊಸ ಮುಖಗಳೆಲ್ಲ ವಿಧಾನ ಸಭೆಗೆ ಪ್ರವೇಶ ಮಾಡಿದಂತಾಯಿತು.

ಉತ್ತರ ಕನ್ನಡದಲ್ಲೂ ಬಿಜೆಪಿ ಗಾಳಿ ಬೀಸಿದ್ದು ನಾಲ್ಕು ಕ್ಷೇತ್ರಗಳಲ್ಲಿ ಜಯಗಳಿಸಿದೆ.

(9ನೇ ಪುಟಕ್ಕೆ)



**ಹಾಲಾಡಿ ಶ್ರೀನಿವಾಸ ಶೆಟ್ಟಿ 103434 ಮತಗಳು**

**ಬಿ.ಎಂ.ಸುಕುಮಾರ ಶೆಟ್ಟಿ ಭರ್ಜರಿ ಗೆಲುವು. ಕುಂದಾಪುರ, ಬೈಂದೂರಿನಲ್ಲಿ ಬಿಜೆಪಿ ಪ್ರಚಂಡ ಪ್ರದರ್ಶನ**

ಕರ್ನಾಟಕ ವಿಧಾನ ಸಭಾ ಚುನಾವಣೆಯಲ್ಲಿ ಕನ್ನಡ ಕರಾವಳಿಯಲ್ಲಿ ಕೇಸರಿ ಪಡೆ ಎಂದೇ ಕರೆಯಲ್ಪಡುವ ಬಿಜೆಪಿ ಭರ್ಜರಿ ಪ್ರದರ್ಶನ ನೀಡಿದೆ. ಮೋದಿ ಅಲೆ ಬೀಸಲಿದೆ ಎಂಬ ಅನಿಸಿಕೆ ನಿಜವಾಗಿದ್ದು ಘಟಾನುಘಟಿ ಅಭ್ಯರ್ಥಿಗಳು ಎಂದು ಕರೆಯಲ್ಪಡುತ್ತಿದ್ದವರೆಲ್ಲ. ಸೋಲನ್ನಪ್ಪಿದ್ದಾರೆ.

# ಕುಂದಾಪುರದ ನಾಲ್ವರು ವಿಧಾನ ಸಭೆಗೆ

ಕುಂದಾಪುರದವರೇ ಆದ ನಾಲ್ವರು ಈ ಬಾರಿ ವಿಧಾನ ಸಭೆ ಪ್ರವೇಶಿಸಿದ್ದು ವಿಶೇಷವಾಗಿದೆ.

ಕುಂದಾಪುರ ಕ್ಷೇತ್ರದಿಂದ ಹಾಲಾಡಿ ಶ್ರೀನಿವಾಸ ಶೆಟ್ಟಿ, ಬೈಂದೂರು ಕ್ಷೇತ್ರದಿಂದ ಬಿ.ಎಂ.ಸುಕುಮಾರ ಶೆಟ್ಟಿ ಗೆಲುವು ಸಾಧಿಸಿದರೆ , ಕುಂದಾಪುರದವರೇ ಆದ ಡಾ.ಭರತ್ ಶೆಟ್ಟಿ ಮಂಗಳೂರು ಉತ್ತರ ಕ್ಷೇತ್ರದಲ್ಲಿ ಜಯಗಳಿಸಿದ್ದಾರೆ. ಕುಂದಾಪುರ ತಾಲ್ಲೂಕಿನ ಸಿದ್ಧಾಪುರ ದಕ್ಕೇರಬಾಳಿನ ಡಿ.ವೇದವ್ಯಾಸ ಕಾಮತ್ ಮಂಗಳೂರು ದಕ್ಷಿಣ ಕ್ಷೇತ್ರದಲ್ಲಿ ಜಯಗಳಿಸಿದ್ದಾರೆ.



ಹಾಲಾಡಿ ಶ್ರೀನಿವಾಸ ಶೆಟ್ಟಿ
ಕುಂದಾಪುರ ಕ್ಷೇತ್ರ



ಬಿ.ಎಂ.ಸುಕುಮಾರ ಶೆಟ್ಟಿ
ಬೈಂದೂರು ಕ್ಷೇತ್ರ



ಡಾ.ವೈ.ಭರತ್ ಶೆಟ್ಟಿ
ಮಂಗಳೂರು ಉತ್ತರ



ಡಿ.ವೇದವ್ಯಾಸ ಕಾಮತ್
ಮಂಗಳೂರು ದಕ್ಷಿಣ